ಬೆಂಗಳೂರು ಹಾಲು ಒಕ್ಕೂಟದಿಂದ ವಿಸ್ತರಣಾಧಿಕಾರಿ ದರ್ಜೆ 3ನ್ನು ನೇಮಕ ಮಾಡಿಕೊಂಡಿರುವ ಬಗ್ಗೆ

1820(523); ಶ್ರೀ ಬಾಲಕೃಷ್ಣ ಹೆಚ್.ಸಿ.

ಅ) ಬೆಂಗಳೂರು ಹಾಲು ಒಕ್ಕೂಟದಿಂದ ವಿಸ್ತರಣಾಧಿಕಾರಿ ದರ್ಜೆ–3 ರ ಹುದ್ದೆಗೆ 2013–14ನೇ ಸಾಲಿನಲ್ಲಿ ಅರ್ಜಿ ಆಹ್ವಾನಿಸಿ ನೇಮಕಾತಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ ಹಾಲು ಉತ್ಪಾದಕರ ಸಹಕಾರ ಸಂಘಗಳ ಸಿಬ್ಬಂದಿಗಳಿಗೆ ಎಷ್ಟು ಹುದ್ದೆಗಳನ್ನು ಮೀಸಲಿಡಲಾಗಿತ್ತು; ಯಾವ ಜಾತಿಗಳಿಗೆ ಮೀಸಲಾತಿಯನ್ನು ಇಡಲಾಗಿತ್ತು; ಅಧಿಸೂಚನೆಯಲ್ಲಿ ನಿಗದಿಪಡಿಸಲಾದ ವಯೋಮಿತಿ ಎಷ್ಟು; (ವಿವರ ನೀಡುವುದು)

ಇ) ಮೀಸಲಾತಿಯಲ್ಲಿ ವಿಸ್ತರಣಾಧಿಕಾರಿ ದರ್ಜೆ–3 ಕ್ಕೆ ಆಯ್ಕೆಯಾಗಿರುವ ಅಭ್ಯರ್ಥಿಗಳ ವಯೋಮಿತಿ ಎಷ್ಟು; ಯಾರ್ಯಾರು ಆಯ್ಕೆಯಾಗಿದ್ದಾರೆ; ನಿಗದಿ ಪಡಿಸಿದ ವಯೋಮಿತಿಗಿಂತ ಹೆಚ್ಚು ವಯಸ್ಸಾದವರನ್ನು ಆಯ್ಕೆ ಮಾಡಿದ್ದರೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಸಚಿವರು)

ಅ) ಬೆಂಗಳೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಿಂದ ವಿಸ್ತರಣಾಧಿಕಾರಿ ದರ್ಜೆ–3 ರ ಹುದ್ದೆಗೆ ದಿನಾಂಕ: 27–09–2013 ರಂದು ದಿನಪತ್ರಿಕೆಯ ಮೂಲಕ ನೇಮಕಾತಿ ಪ್ರಕಟಣೆ ಮೂಲಕ ಅರ್ಜಿ ಆಹ್ವಾನಿಸಿ, ನೇಮಕಾತಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ 2 ಹುದ್ದೆಗಳನ್ನು ಮೀಸಲಿಡಲಾಗಿರುತ್ತದೆ.

ಪರಿಶಿಷ್ಟ ಜಾತಿ (ಗ್ರಾಮಾಂತರ) :– 1 ಹುದ್ದೆ

3(ಎ) ಮಹಿಳೆ :– 1 ಹುದ್ದೆ

ಒಟ್ಟು :– 2 ಹುದ್ದೆಗಳು

ಅಧಿಸೂಚನೆಯಲ್ಲಿ ನಿಗದಿಪಡಿಸಲಾದ ವಯೋಮಿತಿ : ಪರಿಶಿಷ್ಟ ಜಾತಿ ಗರಿಷ್ಠ – 40 ವರ್ಷ

3(ಎ) – 38 ವರ್ಷ

ಇ) ಮೀಸಲಾತಿಯಲ್ಲಿ ವಿಸ್ತರಣಾಧಿಕಾರಿ ದರ್ಜೆ–3ಕ್ಕೆ ಆಯ್ಕೆಯಾಗಿರುವ ಅಭ್ಯರ್ಥಿಗಳ ವಯೋಮಿತಿ ಈ ಕೆಳಕಂಡಂತಿರುತ್ತದೆ:–

ಹೆಸರು : ವಯಸ್ಸು

ಮುನಿರಾಜು ಎಂ. : 45 1/2

ಕವಿತಾ ಎಂ.ಕೆ. : 28

ಶ್ರೀ ಮುನಿರಾಜು ಎಂ. ಪರಿಶಿಷ್ಟ ಜಾತಿಯ ಗ್ರಾಮಾಂತರ ಮೀಸಲಾತಿ ಅಡಿಯಲ್ಲಿ ಆಯ್ಕೆಗೆ ಪರಿಗಣಿಸಲಾಗಿದ್ದು, ಇವರು ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿಯಾಗಿ ದಿನಾಂಕ: 23.07.1998 ರಂದು ಸೇವೆಗೆ ಸೇರ್ಪಡೆಗೊಂಡಿದ್ದು, ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ 15 ವರ್ಷಗಳ ಸೇವಾನುಭವವನ್ನು ಹೊಂದಿರುತ್ತಾರೆ. ಬೆಂಗಳೂರು ಹಾಲು ಒಕ್ಕೂಟದ ಸಿಬ್ಬಂದಿ ಸೇವಾ ಒಳನಿಯಮಗಳ ನಿಯಮ 26 ಹಾಲು ಉತ್ಪಾದಕರ ಸಹಕಾರ ಸಂಘದ ಸಿಬ್ಬಂದಿಗೆ ಮೀಸಲಿಟ್ಟಿದ್ದ ಹುದ್ದೆಗಳಡಿ ನೇಮಕಗೊಳ್ಳುವ ವ್ಯಕ್ತಿಯು ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಸೇವೆ ಸಲ್ಲಿಸಿದ್ದಲ್ಲಿ ಸದರಿ ಅವಧಿಯನ್ನು ಪರಿಗಣಿಸಿ ವಯೋಮಿತಿಯಲ್ಲಿ

ವಿನಾಯಿತಿ ನೀಡಲು ಅವಕಾಶವಿರುತ್ತದೆ. ಅದರಂತೆ ಶ್ರೀ ಮುನಿರಾಜು ಇವರ ನೇಮಕಾತಿ ಸರಿಯಾಗಿ ಇರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು ಬಮೂಲ್ ಇವರು ತಿಳಿಸಿರುತ್ತಾರೆ.

ರೈತರಿಗೆ ಸಾಲ ವಿತರಣೆ ಬಗ್ಗೆ

1821(1411); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಧಾರವಾಡ ಕೇಂದ್ರ ಸಹಕಾರ ಬ್ಯಾಂಕಿನಿಂದ 2014–15 ನೇ ಸಾಲಿನಲ್ಲಿ ಗ್ರಾಮ ವ್ಯವಸಾಯ ಸೇವಾ ಸಹಕಾರ ಬ್ಯಾಂಕುವಾರು ರೈತರಿಗೆ ಎಷ್ಟು ಸಾಲ ವಿತರಣೆ ಮಾಡಲಾಗಿದೆ.

ಆ) ಗರಿಷ್ಠ 3 ಲಕ್ಷ ರೂ.ಗಳ ವರೆಗೆ ಈ ಬ್ಯಾಂಕಿನಿಂದ ಎಷ್ಟು ರೈತರಿಗೆ ಸಾಲ ವಿತರಣೆ ಮಾಡಲಾಗಿದೆ;

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಸಚಿವರು)

ಅ) ಕೆಸಿಸಿ ಬ್ಯಾಂಕ್, ಧಾರವಾಡ ಡಿಸಿಸಿ ಬ್ಯಾಂಕಿನಿಂದ 2014–15 ನೇ ಸಾಲಿನ ಅಕ್ಟೋಬರ್ ಅಂತ್ಯದ ವರೆಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರಿಗೆ ಧಾರವಾಡ ಜಿಲ್ಲೆಗೆ ₹ 6187.81 ಲಕ್ಷ, ಗದಗ ಜಿಲ್ಲೆಗೆ ₹ 3860.92 ಲಕ್ಷ ಹಾಗೂ ಹಾವೇರಿ ಜಿಲ್ಲೆಗೆ ₹ 5680.29 ಲಕ್ಷಗಳ ಸಾಲ ವಿತರಿಸಲಾಗಿದೆ. ಅಂದರೆ ಒಟ್ಟು ₹ 15729.02 ಲಕ್ಷ ಸಾಲ ವಿತರಿಸಲಾಗಿದೆ. ಬ್ಯಾಂಕುವಾರು ಸಾಲ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಗರಿಷ್ಟ 3 ಲಕ್ಷ ರೂಗಳ ವರೆಗೆ ಕೆಸಿಸಿ ಬ್ಯಾಂಕ್, ಧಾರವಾಡ ಡಿಸಿಸಿ ಬ್ಯಾಂಕಿನಿಂದ 2014–15 ನೇ ಸಾಲಿನ ಅಕ್ಟೋಬರ್ ಅಂತ್ಯದ ವರೆಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಧಾರವಾಡ ಜಿಲ್ಲೆಯ 14,712, ಗದಗ ಜಿಲ್ಲೆಯ 12,440 ಹಾಗೂ ಹಾವೇರಿ ಜಿಲ್ಲೆಯ 19,592 ರೈತರಿಗೆ ಅಂದರೆ ಒಟ್ಟು 46,744 ರೈತರಿಗೆ ಸಾಲ ವಿತರಿಸಲಾಗಿದೆ.